ಶೀರ್ಷಿಕೆ ನೋಡಿದ ತಕ್ಷಣ 'ಮತ್ತೆ ಗೋವಿನ ಕತೆಯೆ?' ಎಂದು ಮೂಗು ಮುರಿಯಬೇಡಿ. ಇಲ್ಲಿ ಪುಣ್ಯಕೋಟಿಯಿಲ್ಲ... ಅಂಥದ್ದೇ ಕೋಟಿ ಕೋಟಿ ಜೀವಗಳಿವೆ. ಕೇವಲ ಕನಸುಗಳನ್ನು ನಂಬಿ ಬದುಕುವವರು. ದೇವರು ಮೇಲಿಂದ ಇಳಿದು ಬಂದು ಬೇಕಾದ್ದನ್ನೆಲ್ಲ ಕೊಡುತ್ತಾನೆ ಎಂದು ಕಾಯುವವರು. ನನ್ನ ಊಹೆಗೆ ನಿಲುಕದ ವಿಚಿತ್ರ ಗೋವು ಈ ನಂದಿನಿ. ಇವಳ ಸಾಮೀಪ್ಯಕ್ಕೆ ಬಂದಾಗ ನನಗೆ ಭವ್ಯ ಭಾರತದ ದಿವ್ಯ ದರ್ಶನವಾಯಿತೆಂದರೂ ಅಡ್ಡಿಯಿಲ್ಲ. ನಾವು ಅಭಿವೃದ್ಧಿಯ ಬಗ್ಗೆ ಮಾತನಾಡುತ್ತೇವೆ. ಶಿಕ್ಷಣ ಭಾಗ್ಯ ಎಲ್ಲರಿಗೂ ಲಭಿಸಬೇಕೆಂದು ಮೈಕಿನಲ್ಲಿ ಕೂಗಿ ಕೂಗಿ ಹೇಳುತ್ತೇವೆ. ಬಡತನ ರೇಖೆಯ ಕೆಳಗಿರುವ ಜನರನ್ನು ಮೇಲೆತ್ತಲು ಸರ್ಕಾರ ಸಹಿತ ಅನೇಕರು ಪ್ರಯತ್ನಿಸುತ್ತಿದ್ದಾರೆ. ಆದರೆ, ನಂದಿನಿಯಂಥ ಕೆಲವರು ಎಲ್ಲರ ಪ್ರಯತ್ನಗಳ ಮಧ್ಯೆ ಎಲ್ಲೋ ಪುಳಕ್ಕನೆ ಜಾರಿ ಕಳೆದುಹೋಗಿಬಿಡುತ್ತಾರೆ. ಮತ್ತೆ ನಿಲ್ಲುತ್ತಾರೆ ಪುಣ್ಯಕೋಟಿಯ ತರಹ... ಹುಲಿಯಂತೆ ಬಾಯ್ತೆರೆದು ನುಂಗಲು ಸಿದ್ಧವಾಗಿರುವ ಸಮಾಜದ ಮುಂದೆ. ಇಲ್ಲಿನ ಖೂಳ... ಚಂಡವ್ಯಾಘ್ರರು ತಾವೇ ಹಾರಿ ಪ್ರಾಣ ಕಳೆದುಕೊಳ್ಳುವುದಿಲ್ಲ. ಯಾವ ಪಾಪ, ಪುಣ್ಯಗಳನ್ನೂ ಲೆಕ್ಕಿಸದೇ ತನ್ನವರನ್ನೂ ಬಿಡದೇ ಆಪೋಷನ ತೆಗೆದುಕೊಳ್ಳುವವರು... ಗೊಂದಲವಾಯಿತಲ್ಲ. ಸರಳವಾಗಿ ಹೇಳುತ್ತೇನೆ ಇರಿ...

ನಮ್ಮ ಅಪಾರ್ಟ್‌ಮೆಂಟಿನಲ್ಲಿ ಮೇಲ್ಗಡೆ ಮನೆಯ ಪ್ರಿಯಂವದಾ ಒಡಿಶಾ ಮೂಲದವರು. ಸ್ನೇಹಿತೆಯಾಗಿ ಸುಖ ದುಃಖ ಮಾತಾಡಿಕೊಳ್ಳುವಷ್ಟು ಆತ್ಮೀಯತೆ ಬೆಳೆದಿತ್ತು. ಹುಶಾರಿಲ್ಲದೆ ತೊಂದರೆ ಅನುಭವಿಸುತ್ತಿದ್ದ ಅವರ ಅತ್ತೆ ಹಾಸಿಗೆ ಹಿಡಿದರು. ಒಡಿಯಾ ಭಾಷೆ ಬಿಟ್ಟು ಬೇರೇನೂ ಅರ್ಥವಾಗದವರನ್ನು ನೋಡಿಕೊಳ್ಳಲು ಒಡಿಯಾ ಬಲ್ಲವರೇ ಬೇಕಾಗಿತ್ತು. ಅದಕ್ಕಾಗಿ ತಮ್ಮ ಊರಿನಿಂದಲೇ ಅವರು ನಂದಿನಿಯನ್ನು ಕರೆಸಿದರು. ಮೂವತ್ತರ ಹುಡುಗಿ, ಎರಡು ಮಕ್ಕಳ ತಾಯಿ. ಸಾಧಾರಣ ಎತ್ತರ, ತೆಳು ಎನಿಸುವ ಮೈಕಟ್ಟು, ಸಾದಗಪ್ಪು ಬಣ್ಣ, ದುಂಡು ಮುಖದಲ್ಲಿ ಎದ್ದು ಕಾಣುವ ಅಗಲವಾದ ಕಂಗಳು... ಚೆನ್ನಾಗಿದ್ದಳು. ಅಜ್ಜಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಳು. ಆದರೆ, ಮಾತ್ರೆಗಳನ್ನು ಮಾತ್ರ ಇವರೇ ಕೊಡಬೇಕಿತ್ತು. ಅವಳಿಗೆ ಗೊತ್ತಾಗುತ್ತಿರಲಿಲ್ಲ. ಜೊತೆಗೆ ಪಾತ್ರೆ, ಬಟ್ಟೆಗಳೊಂದಿಗೆ ಹೇಳಿದ ಚಿಕ್ಕ ಪುಟ್ಟ ಕೆಲಸ ಕಾರ್ಯಗಳನ್ನೂ ಮಾಡುತ್ತಿದ್ದಳು. ಸದ್ಯ! ಅವರ ಚಿಂತೆ ಕಡಿಮೆಯಾಗಿತ್ತು.

ದಿನಕ್ಕೆ ಎರಡು ಮೂರು ಬಾರಿಯಾದರೂ ಅವಳು ಕಾಣಿಸುತ್ತಿದ್ದಳು. ಬೆಳಗ್ಗೆ ಮೆಟ್ಟಿಲ ಕಸ ಗುಡಿಸುವಾಗ, ಕಸ ಕೊಡಲು ಬಂದಾಗ, ಸಾಮಾನು ತರುವಾಗ... ಇತ್ಯಾದಿ. ಪ್ರತಿ ಬಾರಿ ಅವಳ ಒಡತಿ, ಎಂದರೆ ದೀದಿ ಹೇಳಿದಂತೆ ಎರಡೂ ಹಸ್ತಗಳನ್ನು ಜೋಡಿಸಿ 'ನಮಸ್ತೆ' ಎನ್ನುತ್ತಿದ್ದಳು. ಕೈಯಲ್ಲಿ ಕಸದ ಡಬ್ಬವಿದ್ದರೆ ಕೆಳಗಿಟ್ಟು, ತರಕಾರಿಗಳ ಚೀಲವಿದ್ದರೆ ಪಕ್ಕಕ್ಕಿಟ್ಟು ಕೈಮುಗಿಯುತ್ತಿದ್ದಳು. ನನಗೂ ಇಷ್ಟೊಂದು ಗೌರವ... ಮುಜುಗರವೇ. ಪ್ರತಿಯಾಗಿ ನಮಸ್ತೆ ಅಂದು ಕೈ ಮಾಡಿ ಒಳಗೆ ಸರಿಯುತ್ತಿದ್ದೆ. ಮೆಲ್ಲನೆ ಅವಳ ಕೆನ್ನೆಗಳು ತುಂಬಿಕೊಳ್ಳುತ್ತಿದ್ದುದನ್ನೂ ಗಮನಿಸಿದೆ. ಬಂದಾಗ ಮಡಿಕೋಲಿನಂತಿದ್ದವಳು ಈಗ ತುಸು ಗುಂಡಗಾಗಿ ಪ್ರಿಯಂವದಾರ ಸಲವಾರ್ ಸೂಟ್‌ಗಳನ್ನು ಧರಿಸುತ್ತಿದ್ದಳು. ನಾಲ್ಕು ತಿಂಗಳಲ್ಲಿ ಪೂರಿ ಉಬ್ಬಿದಂತೆ ಉಬ್ಬಿ ಬಂದಾಗಿನಿಗಿಂತ ಡಬಲ್ ದಪ್ಪಗಾದಳು. ಐದನೇ ತಿಂಗಳಲ್ಲಿ ಪ್ರಿಯಂವದಾರ ಅತ್ತೆ ತೀರಿಹೋದರು.

